# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 62(581)

ಸದಸ್ಯರ ಹೆಸರು : ಶ್ರೀ ಎಸ್.ರುದ್ರೇಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 20.02.2023.

ಉತ್ತರಿಸಬೇಕಾದ ಸಚಿವರು : ಪ್ರವಾಸೋದ್ಯಮ ಹಾಗೂ ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು.

<table>
<tr><th>ಕ್ರಮ ಸಂಖ್ಯೆ:</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕೈಗಾರಿಕೆಗಳು ಪರಿಸರ ನಿಯಂತ್ರಣ ಇಲಾಖೆಯಿಂದ ಒಪ್ಪಿಗೆ ಪಡೆಯಲು ನಿಗದಿಪಡಿಸಿರುವ 10 ವರ್ಷಗಳ ಒಪ್ಪಿಗೆ ಶುಲ್ಕ (Consent fee) ವನ್ನು ಒಟ್ಟಿಗೆ ಕಟ್ಟಬೇಕೆಂಬ ನಿಯಮವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:</td><td>ಹೌದು ಸರ್ಕಾರದ ಗಮನಕ್ಕೆ ಬಂದಿದೆ, ವಿವರ ಕೆಳಕಂಡಂತಿದೆ:<br><br>ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1974 ಮತ್ತು ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1981ರಡಿ ಕೆಂಪು ಪ್ರವರ್ಗ, ಕಿತ್ತಳೆ ಪ್ರವರ್ಗ ಹಾಗೂ ಹಸಿರು ಪ್ರವರ್ಗ ಉದ್ದಿಮೆಗಳಿಗೆ ದೇಶದಾದ್ಯಂತ ಏಕ ರೂಪದ ಸಮ್ಮತಿ ಅವಧಿ ಇರಬೇಕೆಂಬ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ನಿರ್ದೇಶನದಂತೆ 5 ವರ್ಷ, 10 ವರ್ಷ ಹಾಗೂ 15 ವರ್ಷಗಳ ಸಮ್ಮತಿ ಮಾನ್ಯತೆ ಅವಧಿಯನ್ನು ಅನುಸರಿಸುತ್ತಿದೆ. ಅಲ್ಲದೇ, ಸದರಿ ಉದ್ದಿಮೆಗಳಿಗೆ ಚಾಲನ ಸಮ್ಮತಿ ಪತ್ರ (Consent for Operation) ನೀಡಲು ಸರ್ಕಾರದ ಪರಿಷ್ಕೃತ ಸಮ್ಮತಿ ಶುಲ್ಕದ ಅಧಿಸೂಚನೆ ದಿನಾಂಕ 20.11.2021ರಂತೆ, ಈ ಕೆಳಗಿನ ಕೋಷ್ಟಕದಲ್ಲಿ ತೋರಿಸಿರುವಂತೆ ಶುಲ್ಕವನ್ನು ಅಧಿಸೂಚಿಸಿದೆ.<br><br>
<table>
<tr><th rowspan="2">Category</th><th colspan="3">Consent Validity period</th></tr>
<tr><th>Red</th><th>Orange</th><th>Green</th></tr>
<tr><td>Large</td><td>5 years (5 years fee)</td><td>10 years (10 years fee)</td><td>15 years (10 years fee)</td></tr>
<tr><td>Medium</td><td>5 years (5 years fee)</td><td>10 years (10 years fee)</td><td>15 years (10 years fee)</td></tr>
<tr><td>Small</td><td>5 years (3 years fee)</td><td>10 years (6 years fee)</td><td>15 years (1 year fee)</td></tr>
<tr><td>Micro (<25 lakhs)</td><td>5 years (1 year fee)</td><td>10 years (1 year fee)</td><td>One time permanent consent (1 year fee)</td></tr>
</table></td></tr>
<tr><td>ಆ)</td><td>ಹಾಗಿದ್ದಲ್ಲಿ, ಕೈಗಾರಿಕೆಗಳ ಮೇಲಿನ ಹೊರೆ ಭರಿಸುವ ಶಕ್ತಿಯನ್ನು ಸರ್ಕಾರ ಗಣನೆಗೆ ತೆಗೆದುಕೊಂಡಿದೆಯೇ:</td><td>ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಜಲ (ಮಾಲಿನ್ಯತಡೆ ಮತ್ತು ನಿಯಂತ್ರಣ) ಕಾಯ್ದೆ, 1974 ರಡಿಯಲ್ಲಿ ಸ್ಥಾಪನೆಗೊಂಡಿದ್ದು, Karnataka State Pollution Control Board</td></tr>
</table>

| | | |
|---|---|---|
| | ಅಂತಹ ಕೈಗಾರಿಕೆಗಳಲ್ಲಿ 10 ವರ್ಷದಲ್ಲಾಗುವ ಪರಿಸರ ಮಾಲಿನ್ಯದ ಮೇಲೆ ನಿಯಂತ್ರಣ ಉಳಿಯುವುದೇ: | (Procedure for Transaction of Business) and the Water (Prevention and Control of Pollution) Rules, 1976 ರಡಿಯಲ್ಲಿ ಮೊಟ್ಟ ಮೊದಲ ಬಾರಿಗೆ ಸಮ್ಮತಿ ಅರ್ಜಿಗಳಿಗೆ ಸಮ್ಮತಿ ಶುಲ್ಕವನ್ನು 1983 ರಲ್ಲಿ ಅಧಿಸೂಚಿಸಲಾಗಿದ್ದು, ನಂತರ 1991, 1996 & 1998 ರಲ್ಲಿ ಸಮ್ಮತಿ ಶುಲ್ಕವನ್ನು ಪರಿಷ್ಕರಿಸಲಾಗಿರುತ್ತದೆ. ತದನಂತರದಲ್ಲಿ 22 ವರ್ಷಗಳ ನಂತರ ಮಂಡಳಿಯ ಶಿಫಾರಸ್ಸಿನಂತೆ ಸರ್ಕಾರವು ಸಮ್ಮತಿ ಶುಲ್ಕವನ್ನು ಪರಿಷ್ಕರಿಸಿ ಹೊಸ ಅಧಿಸೂಚನೆಯನ್ನು ದಿನಾಂಕ 12.11.2020 ರಂದು ಹೊರಡಿಸಿರುತ್ತದೆ.<br><br>ಈ ಅಧಿಸೂಚನೆಗೆ ಕೈಗಾರಿಕೆಗಳು ಮತ್ತು ಕೈಗಾರಿಕ ಸಂಘಗಳು ತೀವ್ರ ಪ್ರತಿರೋಧ ವ್ಯಕ್ತ ಪಡಿಸಿ ಮನವಿ ಸಲ್ಲಿಸಿದ ಕಾರಣ ಸದರಿ ಅಧಿಸೂಚನೆಗೆ ಭಾಗಶ: ಮಾರ್ಪಾಡು ಮಾಡಿ ಸರ್ಕಾರದಿಂದ ದಿನಾಂಕ: 26.10.2021 ರಂದು ಪರಿಷ್ಕೃತ ಆದೇಶ ಹೊರಡಿಸಲಾಗಿರುತ್ತದೆ.<br><br>ದಿನಾಂಕ 26.10.2021 ರಂದು ಹೊರಡಿಸಿರುವ ಸಮ್ಮತಿ ಶುಲ್ಕದ ಅಧಿಸೂಚನೆಯನ್ನು ಕೈಗಾರಿಕಾ ಸಂಘಗಳು ಮುಖ್ಯವಾಗಿ ಸಣ್ಣ ಮತ್ತು ಮಧ್ಯಮ ವರ್ಗದ ಕೈಗಾರಿಕೆಗಳನ್ನು ಗಮನದಲ್ಲಿಟ್ಟುಕೊಂಡು ನ್ಯಾಯ ಬದ್ದವಾಗಿ ಶುಲ್ಕವನ್ನು ಪರಿಷ್ಕರಿಸಬೇಕೆಂದು ಮಾನ್ಯ ಪ್ರವಾಸೋದ್ಯಮ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರಲ್ಲಿ ಮನವಿ ಸಲ್ಲಿಸಿರುತ್ತಾರೆ.<br><br>ಆ ಪ್ರಕಾರ ದಿನಾಂಕ: 01.02.2022 ರಂದು ಮಾನ್ಯ ಪ್ರವಾಸೋಧ್ಯಮ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಕೈಗಾರಿಕಾ ಸಂಘದ ಪ್ರತಿನಿಧಿಗಳ ಸಮ್ಮುಖದಲ್ಲಿ ಸಭೆ ನಡೆಸಿ ಸಮ್ಮತಿ ಶುಲ್ಕ ಪರಿಷ್ಕರಣೆಗೆ ಬಂದ ಮನವಿಗಳನ್ನು ಅವಗಾಹಿಸಿರುತ್ತಾರೆ ಹಾಗೂ ಮಂಡಳಿಯ ಅಧಿಕಾರಿಗಳಿಗೆ ಉದ್ದಿಮೆಗಳ ಮನವಿಗಳನ್ನು ಪರಿಶೀಲಿಸಲು ಸೂಚಿಸಿದ್ದರು.<br><br>ತದನಂತರ, ಮಂಡಳಿಯು 234ನೇ ಮಂಡಳಿಯ ಸಭೆಯ ನಿರ್ಣಯದಂತೆ, ದಿನಾಂಕ:05.02.2022 ರಂದು ಮಂಡಳಿಯಿಂದ ಸುತ್ತೋಲೆಯನ್ನು ಹೊರಡಿಸಿದೆ. ಅದರಲ್ಲಿ ಮಂಡಳಿಯು ಕಾನೂನು ವಿಭಾಗದ ಸಲಹೆಯನ್ನು ಪಡೆದ ನಂತರ, ಚಾಲನೆಯಲ್ಲಿರುವ ಕಾರ್ಖಾನೆಗಳಿಗೆ ಪೂರ್ತಿ ಶುಲ್ಕವನ್ನು (05, 10, 15 ವರ್ಷಗಳ) ಪಾವತಿಸಲು ಆಗುವುದಿಲ್ಲವೋ ಅಂತಹ ಕಾರ್ಖಾನೆಗಳಿಗೆ, ಕಾರ್ಖಾನೆಗಳು ಕೋರಿರುವ ಕಾಲಾವಕಾಶವು ಸೂಕ್ತವಾಗಿದೆಯೆಂದು ಪರಿಶೀಲಿಸಿದ ನಂತರ case to case basis ಆಧಾರದ ಮೇಲೆ, ಸದರಿಯವರು ಕೇಳಿರುವ ನಿರ್ದಿಷ್ಟ ಅವಧಿಯ ಶುಲ್ಕವನ್ನು ಹಾಗೂ ನಿರ್ದಿಷ್ಟ ಅವಧಿಗೆ ಚಾಲನಾ ಪತ್ರವನ್ನು (Consent for Operation) ನೀಡಲು ಕ್ರಮ ಕೈಗೊಳ್ಳಲು ಸೂಚಿಸಿದೆ.<br><br>ಈ ಪ್ರಕಾರವಾಗಿ ಮಂಡಳಿಯು ಅಧಿಸೂಚಿಸಿ ನಿಗದಿಪಡಿಸಿರುವ ಅವಧಿಗಿಂತ ಕಡಿಮೆ ಅವಧಿಗೆ ಸಮ್ಮತಿ ಶುಲ್ಕ ಪಾವತಿಸಲು ಕೋರುವ ಕಾರ್ಖಾನೆಗಳ ಮನವಿಗಳನ್ನು ಪರಿಶೀಲಿಸಿ ಪುರಸ್ಕರಿಸುತ್ತಿದೆ. |

ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ನೀಡಿರುವ ನಿರ್ದೇಶನ ಅಳವಡಿಕೆಯಿಂದ 10 ವರ್ಷ ಸಮ್ಮತಿ ಪತ್ರ ನೀಡುವಂತಹ ಕೈಗಾರಿಕೆಗಳ ಮೇಲೆ ನಿಯಂತ್ರಣ ಸಾಧಿಸಲು ಮಂಡಳಿಯು ದಿನಾಂಕ: 12.12.2019 ರಲ್ಲಿ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ನಿಗದಿಪಡಿಸಿರುವ Frequency of Inspection ಅನ್ನು ಅಳವಡಿಸಿಕೊಂಡು ಅನುಸರಣೆ ಮಾಡುತ್ತಿದೆ. ಇದರ ವಿವರ ಕೆಳಕಂಡಂತಿದೆ.

| ಕ್ರಮ ಸಂಖ್ಯೆ | ಉದ್ದಿಮೆಗಳ ಪ್ರವರ್ಗ | ಪರಿವೀಕ್ಷಣೆ/ಮಾಪನದ ಕಾಲಮಿತಿ |
|---|---|---|
| 1 | 17ನೇ ಪ್ರವರ್ಗದ ಉದ್ದಿಮೆಗಳು | ಮೂರು ತಿಂಗಳಿಗೊಮ್ಮೆ |
| 2 | ಉಳಿದ ಕೆಂಪು ಪ್ರವರ್ಗದ ಉದ್ದಿಮೆಗಳು | ಆರು ತಿಂಗಳಿಗೊಮ್ಮೆ |
| 3 | ಕಿತ್ತಳೆ ಪ್ರವರ್ಗದ ಉದ್ದಿಮೆಗಳು | ಒಂದು ವರ್ಷಕ್ಕೊಮ್ಮೆ |
| 4 | ಹಸಿರು ಪ್ರವರ್ಗದ ಉದ್ದಿಮೆಗಳು | ಎರಡು ವರ್ಷಕ್ಕೊಮ್ಮೆ |

ಮಂಡಳಿಯ ಅಧಿಕಾರಿಗಳು ಉದ್ದಿಮೆಗಳನ್ನು ಪರಿವೀಕ್ಷಣೆ ಮಾಡುವಾಗ ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1974 ಮತ್ತು ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1981 ರಡಿ, ಜಲ ಹಾಗೂ ವಾಯು ಮಾಲಿನ್ಯ ಉಗಮಗಳಿಂದ ಮಾದರಿಗಳನ್ನು ಶೇಖರಿಸುತ್ತಿದ್ದು, ವಿಶ್ಲೇಷಣಾ ವರದಿಯನ್ನು ಆಧರಿಸಿ ಉದ್ದಿಮೆಗಳ ಮೇಲೆ ಮಾಲಿನ್ಯ ನಿಯಂತ್ರಣಕ್ಕೆ ನಿಯಮಾನುಸಾರ ಅಗತ್ಯ ಕ್ರಮ ತೆಗೆದುಕೊಳ್ಳುತ್ತಿದೆ.

ಇ) ರಾಜ್ಯದಲ್ಲಿ ಪರಿಸರ ನಿಯಂತ್ರಣ ಮಂಡಳಿಯು ಪರಿಸರ ನಿಯಂತ್ರಣಕ್ಕೆ ತೆಗೆದುಕೊಂಡಿರುವ ಕ್ರಮಗಳೇನು?

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1974 ರ ಅಡಿ ಸ್ಥಾಪನೆಗೊಂಡಿದ್ದು, ಜಲ ಕಾಯ್ದೆ, 1974 ಹಾಗೂ ವಾಯು ಕಾಯ್ದೆ, 1981 ಹಾಗೂ ಪರಿಸರ (ಸಂರಕ್ಷಣೆ) ಕಾಯ್ದೆ, 1986 ಅಡಿ ರಚಿಸಿರುವ ಕೆಲವು ನಿಯಮಗಳನ್ನು ಅನುಷ್ಠಾನಗೊಳಿಸುತ್ತಿದೆ.

ಮಂಡಳಿಯು ಹೊಸ ಕೈಗಾರಿಕೆಗಳು/ಚಟುವಟಿಕೆಗಳಿಗೆ ಸ್ಥಾಪನ ಸಮ್ಮತಿ ಪತ್ರ ನೀಡುವಾಗ ಸರ್ಕಾರವು ಹೊರಡಿಸಿರುವ siting guidelinesನ್ನು ಪಾಲಿಸುವ ಕುರಿತು ಪರಿಶೀಲಿಸಲಾಗುತ್ತದೆ ಹಾಗೂ ಕೈಗಾರಿಕೆಗಳು/ ಚಟುವಟಿಕೆಗಳ ಕಾರ್ಯಾಚರಣೆಯ ಸಮಯದಲ್ಲಿ ಮಂಡಳಿಯು ವಿಧಿಸಿರುವ ಷರತ್ತುಗಳನ್ನು ಅಳವಡಿಸಿಕೊಂಡ ನಂತರ ಚಾಲನಾ ಪತ್ರವನ್ನು ಷರತ್ತುಗಳೊಂದಿಗೆ ನೀಡಲಾಗುತ್ತಿದೆ. ಇದಲ್ಲದೆ ಮಂಡಳಿಯು ರಾಜ್ಯದಲ್ಲಿ ಮಾಲಿನ್ಯ ನಿಯಂತ್ರಿಸಲು ತೆಗೆದುಕೊಂಡ ಕ್ರಮಗಳು ಕೆಳಕಂಡಂತಿದೆ;

- ಜಲ ಕಾಯ್ದೆ ಹಾಗೂ ವಾಯು ಕಾಯ್ದೆ ಅಡಿಯಲ್ಲಿ ಕೈಗಾರಿಕೆಗಳಿಂದ ಉಂಟಾಗುವ ಜಲ ಹಾಗೂ ವಾಯು ಮಾಲಿನ್ಯ ನಿಯಂತ್ರಿಸುವುದು.
- ರಾಜ್ಯಾದ್ಯಂತ ಕೈಗಾರಿಕೆಗಳು ಮತ್ತು ಸ್ಥಳೀಯ ಸಂಸ್ಥೆಗಳು ಕಲುಷಿತ ನೀರನ್ನು ಹಾಗೂ ವಾಯು ಮಾಲಿನ್ಯ ಮೂಲಗಳಿಗೆ ಮಾಲಿನ್ಯ

| | | |
|---|---|---|
| | | ನಿಯಂತ್ರಣ ಘಟಕಗಳನ್ನು ಅಳವಡಿಸಿ, ಮಂಡಳಿ ನಿಗಧಿಪಡಿಸುವ ಗುಣಮಾನಕಗಳಿಗೆ ಕಾರ್ಯ ನಿರ್ವಹಿಸುತ್ತಿರುವುದನ್ನು ಮಾಪನ ಮಾಡುವುದು.<br>• ವಸತಿ ಸಮುಚ್ಚಯಗಳಿಂದ ಉತ್ಪತ್ತಿಯಾಗುವ ರೊಚ್ಚು ನೀರನ್ನು ಕಡ್ಡಾಯವಾಗಿ ರೊಚ್ಚು ನೀರು ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಿ, ಮಂಡಳಿಯು ನಿಗದಿಪಡಿಸಿರುವ ಮಾನದಂಡಗಳಿಗೆ ಸಂಸ್ಕರಿಸಿ, ಸಂಸ್ಕರಿಸಿದ ನೀರನ್ನು ಶೌಚಾಲಯ, ವಾಹನ ಶುಚಿಗೊಳಿಸುವಿಕೆ, ಸಸ್ಯಗಳಿಗೆ ನೀರುಣಿಸುವ ಹಾಗೂ ಇತರೆ ಕಾರ್ಯಗಳಿಗೆ ಪುನರ್ ಬಳಕೆ ಮಾಡಲು ನಿರ್ದೇಶಿಸುವುದು.<br>• ಉಲ್ಲಂಘಿತ ಘಟಕಗಳ ವಿರುದ್ಧ ಕಾನೂನು ಅಡಿ ಕ್ರಮಗಳನ್ನು ಜರುಗಿಸುವುದು.<br>• ರಾಜ್ಯದಲ್ಲಿನ ನದಿ ಹಾಗೂ ಕೆರೆ ನೀರಿನ ಗುಣಮಟ್ಟದ ಮಾಪನ ಮಾಡುವುದು.<br>• ರಾಜ್ಯದಲ್ಲಿ ಪರಿವೇಷ್ಟಿಕ ವಾಯು ಹಾಗೂ ಶಬ್ದ ಗುಣಮಟ್ಟ ಮಾಪನ ಮಾಡುವುದು. ಮಾಪನದ ವರದಿಯಲ್ಲಿ ನಿಗದಿತ ಮಾನದಂಡಗಳಿಗಿಂದ (ಕಡಿಮೆ ಹಾಗು ಹೆಚ್ಚು) ವ್ಯತ್ಯಾಸ ಕಂಡುಬಂದಲ್ಲಿ ಸಂಬಂದಪಟ್ಟ ಇಲಾಖೆಗಳಿಗೆ ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸುವುದು.<br>• ಪರಿಸರ (ಸಂರಕ್ಷಣೆ) ಕಾಯ್ದೆ, 1986 ರಡಿಯಲ್ಲಿ ರಚಿಸಲಾದ ಘನ ತ್ಯಾಜ್ಯ ನಿರ್ವಹಣೆ, ಅಪಾಯಕಾರಿ ತ್ಯಾಜ್ಯ ನಿರ್ವಹಣೆ, ಆಸ್ಪತ್ರೆ ತ್ಯಾಜ್ಯ ನಿರ್ವಹಣೆ, ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ, ಇ-ತ್ಯಾಜ್ಯ ನಿರ್ವಹಣೆ 2000 ನಿಯಮಗಳನ್ನು ಅನುಷ್ಠಾನಗೊಳಿಸುವುದು. |

ಸಂಖ್ಯೆ: ಅಪಜೀ 148 ಇಪಿಸಿ 2023

(ಆನಂದ್ ಸಿಂಗ್)
ಪ್ರವಾಸೋದ್ಯಮ ಹಾಗೂ ಜೀವಿಪರಿಸ್ಥಿತಿ
ಮತ್ತು ಪರಿಸರ ಸಚಿವರು.